# ಕಾಮನಬಿಲ್ಲು ಕೋರಿದ ಮಳೆಬಿಲ್ಲಿನಂಥ ಹುಡುಗಿ!



ಡ್ರಗ್ಸ್ ಪೆಡ್ಲಿಂಗ್ ಕೇಸ್‌ನಲ್ಲಿ ಸಿಕ್ಕಿಕೊಂಡು ಪೊಲೀಸ್ ಠಾಣೆಯಲ್ಲಿ ಕೂತಿದ್ದ ಮೊಮ್ಮಗ ಸೋನಾನನ್ನು ಕಂಡು ಗುನ್ನಾಲಾಲ್ ಅವರಿಗೆ ಸಂಕಟವಾಯಿತು.

ಮೊಮ್ಮಗನ ತಲೆ ಸವರಿ ಎಸಿಪಿ ರಾಣೆಯ ಕಡೆ ನೋಡಿಕೊಂಡು 'ರಾಣೆ ಸಾಬ್ ನನ್ನ ಸೋನಾ ಮೇಲೆ ನನಗೆ ಹಂಡ್ರೆಡ್ ಪರ್ಸೆಂಟ್ ನಂಬಿಕೆ ಇದೆ. ಏನೋ ಬೈ ಮಿಸ್ಟೇಕ್ ನಡೆದುಹೋಗಿದೆ. ಇನ್ನ್ಯಾವೊತ್ತೂ ನನ್ನ ಮೊಮ್ಮಗ ಇಂಥ ಕೆಲಸ ಮಾಡಲ್ಲ, ನಿಮ್ಮದು ಏನು ಹೇಳಿ ಬಿಡಿ. ಇವನ ಗೆಳೆಯರನ್ನೂ ಬಿಟ್ಟು ಬಿಡಿ...' ಎಂದ ಗುನ್ನಾಲಾಲ್. ರಾಣೆಗೂ ಅದೇ ಬೇಕಿತ್ತು. ಇನ್ನೂ ಮೂರ್ನಾಲ್ಕು ಇಂಥ ಕೇಸುಗಳನ್ನು ಇವೊತ್ತು ಹ್ಯಾಂಡಲ್ ಮಾಡುವುದಿತ್ತು.

'ಡಿಸಿಪಿ ಸಾಬ್ ಒಂದು ರೂಪಾಯಿ ಹೇಳ್ತಿದಾರೆ, ಎಪ್ಪತ್ತೈದು ಪೈಸೆಗೆ ಒಪ್ಪಿದರೆ ಫೈಸಲ್ ಮಾಡೋಣ...' ರಾಣೆ ತಟ್ಟನೆ ಹೇಳಿದ್ದ.

'ಚಿಲ್ಲರೆ ಎಪ್ಪತ್ತೈದು ಪೈಸೆ ಬೇಡ ಒಂದ್ರುಪಾಯಿನೇ ಕೊಡ್ತೀನಿ' ಎಂದು ಗುನ್ನಾಲಾಲ್ ಎದ್ದು ನಿಂತ. ಎಸಿಪಿ ನಕ್ಕ. ಡಿಸಿಪಿಗೆ ಕೈಕುಲುಕಿ ಮೊಮ್ಮಗನೊಂದಿಗೆ ಕಚೇರಿಯಿಂದ ಹೊರಟ ಗುನ್ನಾಲಾಲನ ಮುಖದಲ್ಲಿ ಸಂಭ್ರಮವಿತ್ತು. ಮುಂಬಯಿಯ ಪೊಲೀಸ್ ಇಲಾಖೆಯ ಹೈ ಲೆವೆಲ್‌ನಲ್ಲಿ ಮತ್ತು ಭೂಗತ ಲೋಕದ ಟಾಪ್ ಲೆವೆಲ್‌ನಲ್ಲಿ ಒಂದು ಪೈಸೆಗೆ ಒಂದು ಲಕ್ಷ ಎಂತಲೂ, ಒಂದು ರೂಪಾಯಿಗೆ ಒಂದು ಕೋಟಿ ಎಂತಲೂ ಅರ್ಥವುಂಟು. ಇನ್ನು ಕಡಿಮೆ ಲೆವೆಲ್‌ನಲ್ಲಿ ಪೈಸೆಗೆ ಸಾವಿರ ಎಂತಲೂ, ರೂಪಾಯಿಗೆ ಲಕ್ಷ ಎಂತಲೂ ಕರೆಯುತ್ತಾರೆ! ಎರಡು ದಿನಗಳ ಕಾಲ ಸೋನಾಲಾಲ್ ಮನೆ ಬಿಟ್ಟು ಹೊರಗೆಲ್ಲೂ ಹೋಗಲಿಲ್ಲ. ರೂಮು ಬಿಟ್ಟು ಸಹ ಬರಲಿಲ್ಲ. ಮೂರನೇ ದಿನ ಗುನ್ನಾಲಾಲನೇ ಸೋನಾಲಾಲ್ ರೂಮಿಗೆ ಹೋಗಿ ಮೊಮ್ಮಗನ ತಲೆ ನೇವರಿಸಿದ್ದ.

'ಗುನ್ನಾ, ಡ್ರಗ್ಸ್ ಸೇವಿಸೋದು ಕೆಟ್ಟದ್ದು ಅಂತಾದರೆ ಅದನ್ನೇಕೆ ಸಂಪೂರ್ಣವಾಗಿ ನಿಷೇಧ ಮಾಡಿಲ್ಲ. ಅದು ಅಂಥ ಘೋರ ಅಪರಾಧವಾದರೆ ಪೊಲೀಸರು ನನ್ನ ತಪ್ಪನ್ನು ಮನ್ನಿಸಿ ಕೇಸ್ ಹಾಕದೆ ಬಿಡಲು ನಿನ್ನ ಬಳಿ ಅಷ್ಟೊಂದು ಮೊತ್ತದ ಹಣವನ್ನು ಏಕೆ ವಸೂಲಿ ಮಾಡಿದರು. ಡ್ರಗ್ಸ್ ಸೇವಿಸೋದು ಕೆಟ್ಟದ್ದು ಎನ್ನುವುದಾದರೆ ಲಂಚ ಪಡೆದು ಅಪರಾಧ ಮಾಡಿದವರನ್ನು ಬಿಡುವುದು ತಪ್ಪಲ್ಲವೇನು?' ಎಂದು ಸೋನಾಲಾಲ್ ಮುಖದಲ್ಲಿ ಖಿನ್ನತೆಯನ್ನು ತುಂಬಿಕೊಂಡು ಕೇಳಿದ್ದ. ಗುನ್ನಾಲಾಲನಿಗೆ ಮೊಮ್ಮಗನಿಗೆ ಏನೆಂದು ಉತ್ತರಿಸಬೇಕೆಂದು ತೋಚಲಿಲ್ಲ.

'ಸೋನಾ ಜಗತ್ತಿನಲ್ಲಿ ಒಳ್ಳೆಯದು, ಕೆಟ್ಟದ್ದು ಎಂಬ ಸಂಗತಿಗಳನ್ನು ಮನುಷ್ಯನೇ ಮಾಡಿಕೊಂಡಿದ್ದು. ಸಾಮಾನ್ಯವಾಗಿ ಮನುಷ್ಯ ಹೆಚ್ಚಾಗಿ ಮಾರುಹೋಗುವುದೇ ಕೆಟ್ಟದ್ದೆಂದು